ಉದಯವಾಣಿ
ಕನ್ನಡ ದಿನಪತ್ರಿಕೆ

# ಎನ್‌ಬಿಎ ಜಾಮ್: ಜೈನ್ ವಿವಿಗೆ ಗೆಲುವು



ಬೆಂಗಳೂರು: ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡ ಎನ್‌ಬಿಎ ಜಾಮ್ ರಾಷ್ಟ್ರೀಯ ಬಾಸ್ಕೆಟ್‌ಬಾಲ್ ಪಂದ್ಯಾವಳಿ ಪುರುಷರ ವಿಭಾಗದಲ್ಲಿ ಅರ್ಹತೆ ಗಿಟ್ಟಿಸಿದೆ.

ರಾಷ್ಟ್ರೀಯ ಬಾಸ್ಕೆಟ್‌ಬಾಲ್ ಸಂಸ್ಥೆಯ ವತಿಯಿಂದ ಭಾನುವಾರ ನಡೆದ ಲೀಗ್‌ನಲ್ಲಿ ಜೈನ್ ತಂಡ 24-15 ಅಂಕಗಳಿಂದ ಕ್ರೈಸ್ಟ್ ಫ್ಲೇಮ್ಸ್ ತಂಡದ ವಿರುದ್ಧ ಜಯ ಸಾಧಿಸಿತು.

ಮಹಿಳೆಯರ ವಿಭಾಗದ ಫೈನಲ್‌ನಲ್ಲಿ ಮೌಂಟ್ಸ್ 'ಎ' ತಂಡ 16- 8 ಅಂಕಗಳಿಂದ ಜೈನ್ 'ಎ' ತಂಡವನ್ನು ಬಗ್ಗುಬಡಿದರೆ, ಬಾಲಕರ ವಿಭಾಗದ ಫೈನಲ್‌ನಲ್ಲಿ ಸುರಾನಾ ಕಾಲೇಜು ತಂಡ 18- 14 ರಿಂದ ಕ್ರೈಸ್ಟ್ ಕಾಲೇಜು ತಂಡದ ವಿರುದ್ಧ ಹಾಗೂ ಬಾಲಕಿಯರ ವಿಭಾಗದಲ್ಲಿ ಜೂನಿಯರ್ ಬಾಲಕಿಯರ ಕ್ರೈಸ್ಟ್ ಎಕ್ಸ್‌ಟ್ರುಡ್ ತಂಡ 6-3 ರಿಂದ ವಿವೇಕ್ಸ್ ತಂಡವನ್ನು ಮಣಿಸಿತು. ಟೂರ್ನಿಯಲ್ಲಿ ನಗರದ 100ಕ್ಕೂ ಹೆಚ್ಚು ಕಾಲೇಜು ತಂಡಗಳು ಭಾಗವಹಿಸಿದ್ದವು.